**ಓ ಎಸ್ 145/2023 ಡಿಡಬ್ಲ್ಯೂ.2**

**ಸಾಕ್ಷಿಯನ್ನು ದಿಃ 08.04.2026 ರಂದು ಕರೆಯಿಸಿ ಪ್ರಮಾಣವಚನ ಬೋಧಿಸಲಾಯಿತು.**

**ಮುಂದುವರಿದ ಪಾಟೀ ಸವಾಲುಃ ವಾದಿ ಪರ ಶ್ರೀ ಡಿ ಟಿ ವಿ ವಕೀಲರಿಂದಃ**

ಕೊಳವೆ ಬಾವಿಯನ್ನು ಸರ್ವೆ ನಂ. 9 ರಲ್ಲಿ ಗೋವಿಂದೇಗೌಡರು ಕೊರೆಸಿದ್ದಾರೆ. ಸುಮಾರು 1 ವರ್ಷದ ಹಿಂದೆ ಸದರಿ ಕೊಳವೆ ಬಾವಿಯನ್ನು ಕೊರೆಸಿದ್ದಾರೆ. ಆ ಸಂಬಂಧ ನಾನು ದಾಖಲೆಯನ್ನು ನೋಡಿಲ್ಲ. ದಾವಾ ಷೆಡ್ಯೂಲ್ ಐಟಂ ನಂ. 8 ರಲ್ಲಿ 2 ಎಕರೆ 0.23 ಗುಂಟೆ ಪೈಕಿ ಎಲ್ಲರೂ ತಲಾ 0.20 ಗುಂಟೆಯಂತೆ ಹಂಚಿಕೊಂಡು ಸಣ್ಣೇಗೌಡರಿಗೆ 0.23 ಗುಂಟೆ ಹೆಚ್ಚಿಗೆ ನೀಡಿದ್ದಾರೆ ಎಂಬ ಬಗ್ಗೆ ನಾನು ದಾಖಲೆಯನ್ನು ನೋಡಿಲ್ಲ. ದಾವಾ ಷೆಡ್ಯೂಲ್ ಐಟಂ ನಂ. 8 ರ ಜಮೀನು ಯಾವುದೇ ರೀತಿಯ ವಿಭಾಗ ಆಗದೆ ಎಲ್ಲರ ಹೆಸರಿನಲ್ಲಿ ಜಂಟಿಯಾಗಿ ಬರುತ್ತಿದೆ ಎಂದರೆ ಸರಿ. ಯರೇಗೌಡನಹಳ್ಳಿಯ ಪಾಪಮ್ಮರವರನ್ನು ಸಣ್ಣೇಗೌಡರು ಯಾವುದೇ ರೀತಿಯಲ್ಲಿಯೂ ನೋಡಿಕೊಳ್ಳದೆ ಇದ್ದರೂ ಸಹ ಆಸ್ತಿ ಹೊಡೆದುಕೊಳ್ಳುವ ಸಲುವಾಗಿ ಸುಳ್ಳು ಹೇಳುತ್ತಿದ್ದೇವೆ ಎಂದರೆ ಸರಿಯಲ್ಲ. ತಿಮ್ಮೇಗೌಡರ ಮಗಳ ಮದುವೆ ನಡೆದು ಸುಮಾರು 10 ರಿಂದ 12 ವರ್ಷವಾಗಿರಬಹುದು. ಅಂತಹ ಮದುವೆಗಾಗಿ ತಿಮ್ಮೇಗೌಡರು ಜಮೀನು ಮಾರಾಟ ಮಾಡುತ್ತೇನೆ ಎಂದು ಹೇಳಿ ಯಾರಿಂದಲೂ ಸಹ ಹಣ ಪಡೆದುಕೊಳ್ಳದೆ ಇದ್ದರೂ ಸಹ ಪ್ರತಿವಾದಿಗಳ ಮಾತು ಕೇಳಿಕೊಂಡು ನಾನು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ವಾದಿಯು 5 ನೇ ಪ್ರತಿವಾದಿ ಗಂಡ ವೆಂಕಟೇಶ್, 4 ನೇ ಪ್ರತಿವಾದಿ ಗೋವಿಂದೇಗೌಡ ಹಾಗೂ ಹೆಚ್ ಸಿ ಧನಂಜಯರವರಿಂದ ಹಣ ಪಡೆದುಕೊಂಡು ಜಮೀನು ಮಾರಾಟ ಮಾಡಿದ್ದಾರೆ ಎಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ವಾದಿ ತಿಮ್ಮೇಗೌಡರ ಮಗಳು ಶಾರದಾ ತನ್ನ ಗಂಡನ ಜೊತೆಯಲ್ಲಿಯೇ ಇದ್ದಾರೆ ಎಂದರೆ ಸರಿ. ವಾದಿಯ ಮಗಳು ಶಾರದಾ ತನ್ನ ತಂದೆಯಿಂದ ಯಾವುದೇ ರೀತಿಯ ಹಣದ ಅಪೇಕ್ಷೆ ಪಡದೆ ತಾನು ಹಾಗೂ ತನ್ನ ಗಂಡ ಸ್ವಂತವಾಗಿ ದುಡಿದು ಜೀವನ

ನಡೆಸಿಕೊಂಡು ಆಸ್ತಿಗಳನ್ನು ಸಂಪಾದಿಸಿದ್ದಾರೆ ಎಂದರೆ ಸರಿಯಲ್ಲ, ಶಾರದಾರವರು ತನ್ನ ಗಂಡನ ಜೊತೆಯಲ್ಲಿ ಬೇರೆಯೇ ಇದ್ದಾರೆ. ಗೋವಿಂದೇಗೌಡರಿಗೆ ಬಂದಿದೆ ಎಂದು ಹೇಳುತ್ತಿರುವ ಗೋಮಾಳ ಭೂಮಿಯು ಸಹ ಒಟ್ಟು ಕುಟುಂಬದ ಆಸ್ತಿ ಎಂದರೆ ಇರಬಹುದು. ಗೋವಿಂದೇಗೌಡರು ಮನೆ ಕಟ್ಟಿಕೊಂಡಿರುವ ಜಾಗ ಒಟ್ಟು ಕುಟುಂಬದ ಆಸ್ತಿ ಎಂದರೆ ಸರಿಯಲ್ಲ. ವಾದಿ ಮತ್ತು ಪ್ರತಿವಾದಿಗಳ ಕುಟುಂಬದಲ್ಲಿ ವಿಭಾಗ ಆಗಿರುವ ಬಗ್ಗೆ ನಾನು ಯಾವುದೇ ದಾಖಲೆಯನ್ನು ನೋಡದೆ ಇದ್ದರೂ ಮತ್ತು ಅಂತಹ ಯಾವುದೇ ವಿಭಾಗ ಆಗದೆ ಇದ್ದರೂ ಪ್ರತಿವಾದಿಗಳಿಗೆ ಸಹಾಯ ಮಾಡಲು ಅವರ ಮಾತು ಕೇಳಿಕೊಂಡು ನ್ಯಾಯಾಲಯದಲ್ಲಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ವಾದಿ ತಿಮ್ಮೇಗೌಡರಿಗೆ ಆಸ್ತಿ ಬರಬಾರದು ಎಂದು ಮೋಸ ಮಾಡಲು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆಃ ಇಲ್ಲ.**

**(ನನ್ನ ಉಕ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಿಸಿದೆ)**

**ಸಾ ಓ ಹೇ ಸ ಒ**

**(ಬಾಬು ಎನ್)**
**1 ನೇ ಅಪರ ಹಿರಿಯ ಸಿವಿಲ್ ನ್ಯಾಯಾಧೀಶರು,**
**ಪಾಂಡವಪುರ**